**<u>ದಿನಾಂಕಃ21.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ ವಾದಿ ಪರ ಶ್ರೀ ಡಿ ಕೆ ಎಂ ವಕೀಲರಿಂದಃ</u>**

ನನಗೆ ಯೋಗೇಶ್ ಪರಿಚಯ. ದಾವಾ ಸ್ವತ್ತನ್ನು ಖರೀದಿದಾರ ಪತ್ರ ಮಾಡು ಮುಂಚಿತವಾಗಿ ಪರಿಚಯ. ಇದಕ್ಕೂ ಮುಂಚಿತವಾಗಿ ಯೋಗೇಶ್ ರವರಿಗೆ ನಾನು ಕರಡು ಪತ್ರವನ್ನು ಮಾಡಿಕೊಟ್ಟಿದ್ದು ಅದನ್ನು ರದ್ದುಪಡಿಸಿದ ನಂತರ ವಾದಿಗೆ ಮಾಡಿಕೊಟ್ಟಿರುತ್ತೇನೆ. ಯೋಗೇಶ್ ರವರು ನಾನು ವ್ಯವಹಾರವನ್ನು ಶಾಂತಿಯುತವಾಗಿ ಬಗೆಹರಿಕೊಂಡಿರುತ್ತೇವೆ. ಪುಟ್ಟರಾಜು ರವರ ಮಗ ನವೀನ್ ರವರು ನನಗೆ ಪರಿಚಯ ಇಲ್ಲ. ಗೂರನಹಳ್ಳಿ ಗ್ರಾಮದ ಅಶೋಕ್ ರವರು ನನಗೆ ಪರಿಚಯ ಇಲ್ಲ. ಅಶೋಕ್ ಮತ್ತು ನವೀನ್ ರವರನ್ನು ನಾನು ನೋಡಿರುವುದಿಲ್ಲ. ಪತ್ರಬರಹಗಾರರಾದ ನಾಗರಾಜು ನನಗೆ ಪರಿಚಯ ಇಲ್ಲ. ಬೇರೆ ಕರಾರು ಪತ್ರವನ್ನು ಮತ್ತು ದಾಖಲಾತಿಯನ್ನು ಕೇಶವಮೂರ್ತಿ ಎಂಬ ಪತ್ರಬರಹಗಾರರಿಂದ ಮಾಡಿಸಿರುತ್ತೇವೆ ಈ ಕೇಸಿನಲ್ಲಿ ಹಾಜರು ಮಾಡಿರುವ ದಸ್ತಾವೇಜು ಪತ್ರವನ್ನು ನಾನೇ ತಂದಿರುತ್ತೇನೆ. ಖಾಲಿ ಪೇಪರ್ ನಲ್ಲಿ ಸಹಿ ಮಾಡಲಾಗಿರುತ್ತದೆ. ಜಮೀನಿನ ಖಾತೆ ಆದ ನಂತರ ಸಹಿ ಮಾಡಿದಂತಹ ಪೇಪರ್ ನ್ನು ವಾಪಸ್ಸು ಕೊಡುತ್ತೇವೆ ಎಂದು ಹೇಳಿ ಸಹಿಯನ್ನು ಮಾಡಿಸಿಕೊಂಡಿರುತ್ತಾರೆ. ವಾದಿಯ ಪತಿಯಾದ ನಾಗರಾಜು ರವರು ಮಾಡಿಸಿಕೊಂಡಿರುತ್ತಾರೆ. ಸೈಟ್ ನ್ನು ಮೊದಲು ಕರಡು ಪತ್ರ ಮಾಡಿಕೊಟ್ಟಿದ್ದು ನಂತರ ಅದನ್ನು ರದ್ದುಪಡಿಸಿ ಜಮೀನಿನ ಬಗ್ಗೆ ಕರಾರು ಪತ್ರವನ್ನು ಮಾಡಿಕೊಡಲಾಗಿರುತ್ತದೆ. ಎರಡೂ ಪತ್ರಗಳನ್ನು ನನ್ನ ಸೂಚನೆಯ ಮೇರೆಗೆ ಮಾಡಲಾಗಿರುತ್ತದೆ. ರದ್ದು ಪತ್ರ ಹಾಗೂ ಕ್ರಯ ಪತ್ರವನ್ನು ಒಂದೇ ದಿನ

ಮಾಡಿಕೊಡಲಾಗಿರುತ್ತದೆ. ಎರಡೂ ಪತ್ರಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ವ್ಯಾಜ್ಯ ಸ್ವತ್ತುಗಳನ್ನು ಬೇರೆಯವರಿಗೆ ಮಾರಾಟ ಮಾಡಲು ಮಾತುಕತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಬೇರೆಯವರಿಗೆ ಹೆಚ್ಚಿನ ಮೊತ್ತಕ್ಕೆ ಮಾರಾಟ ಮಾಡಲು ಕರಾರು ಪತ್ರವನ್ನು ರದ್ದುಪಡಿಸಿರುತ್ತೇವೆ ಎಂದರೆ ಸರಿಯಲ್ಲ

ದಾವಾ ಸ್ವತ್ತಿಗೆ ಸಂಬಂಧಪಟ್ಟಂತ ನೊಂದಣಿ 5 ಲಕ್ಷ ಕ್ಕೆ ಆಗಿರುತ್ತದೆ ಆದರೆ ನಾನು ಪಡೆದಿರುವುದು 3 ಲಕ್ಷ. ನಾನು ಕರಾರು ಪತ್ರ ಮಾಡಿದ್ದು ಯೋಗೇಶ್ ರವರಿಗೆ ದಿಃ 10.12.2012 ರಂದು ದಾವಾ ಸ್ವತ್ತಿನ ಬಗ್ಗೆ ಮಾಡಿಕೊಟ್ಟಿದ್ದಾಗಿರುತ್ತದೆ. ಯೋಗೇಶ್ ರವರು ಕ್ರಯ ಪತ್ರ ಮಾಡಿಸಿಕೊಳ್ಳಲು ಬರಲಿಲ್ಲ ಎಂದರೆ ಸಾಕ್ಷಿಯು ನಾನು ಆಧಾರವಾಗಿ ಆ ಪತ್ರವನ್ನು ಮಾಡಿಕೊಟ್ಟಿರುತ್ತೇನೆ ಹಣ ಪಾವತಿ ಆದ ನಂತರ ರದ್ದು ಪತ್ರ ಮಾಡಿಸಲಾಗಿರುತ್ತದೆ ಎನ್ನುತ್ತಾರೆ. ಆ ಸಂದರ್ಭದಲ್ಲಿ ನನಗೆ ಹಣದ ಅವಶ್ಯಕತೆ ಇದ್ದು ಆದ್ದರಿಂದ ವಾದಿಗೆ ಮಾರಾಟ ಮಾಡಲು ಮಾತುಕತೆ ನಡೆಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಮಾರಾಟ ಮಾಡಲು ಎಂದು ಹೇಳಿ 7,50,000 ರೂಗಳಿಗೆ ಕ್ರಯ ನಿಷ್ಕರ್ಶೆ ಆಗಿರುತ್ತದೆ ಎಂದರೆ ಸರಿಯಲ್ಲ. ಮೊದಲಿಗೆ ಇದ್ದಂತ 5 ಲಕ್ಷ ರೂಪಾಯಿ ನನ್ನ ಬಳಿ ಇದ್ದು ಹಾಗೂ ಹೆಚ್ಚುವರಿಯಾಗಿ 1 ಲಕ್ಷ ಮುಂಗಡ ಹಣವನ್ನು ಪಡೆದುಕೊಂಡು ಕರಾರು ಪತ್ರವನ್ನು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ . ಉಳಿಕೆ 1,50000 ರೂಗಳನ್ನು ಕ್ರಯ ಪತ್ರ ಮಾಡುವ ಸಂದರ್ಭದಲ್ಲಿ ಕೊಡಲಾಗುತ್ತದೆ ಎಂದು ಮಾತುಕತೆ ಆಗಿರುತ್ತದೆ ಎಂದರೆ ಸರಿಯಲ್ಲ. ಕರಾರು ಪತ್ರ ರದ್ದುಮಾಡುವಾಗ ಸ್ವತ್ತಿನಲ್ಲಿ ಬಾಡಿಗೆದಾರರು ಇದ್ದರು ಎಂದರೆ ಆಗಲೂ ಇದ್ದರೂ ಈಗಲೂ ಇದ್ದಾರೆ ಎನ್ನುತ್ತಾರೆ. ಬಾಡಿಗೆದಾರರನ್ನು ಖಾಲಿ ಮಾಡಿಸಿದ ತಕ್ಷಣ 1,50,000 ಪಡೆದುಕೊಂಡು ಕ್ರಯ ಪತ್ರ ಮಾಡಿಕೊಡುತ್ತೇನೆ ಎಂದು

ಮಾತುಕತೆ ಮಾಡಿರುತ್ತೆನೆ ಎಂದರೆ ಸರಿಯಲ್ಲ. ಖಾಲಿ ಪತ್ರ ನನ್ನ ಸೂಚನೆ ಮೇರೆಗೆ ವಾದಿಗೆ ಬರೆದುಕೊಟ್ಟಂತಹ ಕರಾರು ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ

ನಾನು ಎಸ್ ಎಸ್ ಎಲ್ ಸಿ ವರೆಗೆ ವ್ಯಾಸಾಂಗ ಮಾಡಿದ್ದೇನೆ. ನನಗೆ ಆಸ್ತಿಯ ವ್ಯವಹಾರ ಜ್ಞಾನ ಸಾಮಾನ್ಯವಾಗಿ ಇರುತ್ತದೆ. ನಾನು ವಾದಿಗೆ ಮೊಸ ಮಾಡುವ ಉದ್ದೇಶದಿಂದ ಖಾಲಿ ಪೇಪರ್ ಗೆ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಖಾಲಿ ಪೇಪರ್ ನಲ್ಲಿ ಒಂದು ಕಡೆ ಸಹಿ ಮಾಡಿದ್ದೇನೆ. ಸಾಕ್ಷಿ ಮುಂದುವರೆದು ಒಂದು ಅಥವಾ ಎರಡು ಸಹಿ ಮಾಡಿರಬಹುದು. ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ ದಾಖಲಾತಿ ತೋರಿಸಿದಲ್ಲಿ ಹೇಳಬಹುದು ಎನ್ನುತ್ತಾರೆ. ಆ ಪತ್ರದ ಜೆರಾಕ್ಸ್ ನ್ನು ಪಡೆದುಕೊಂಡಿರುವುದಿಲ್ಲ. ಖಾಲಿ ಪತ್ರಕ್ಕೆ ಸಹಿ ಮಾಡಿದ್ದಕ್ಕೆ ಅವರ ಹತ್ತಿರ ಪತ್ರವನ್ನು ತರಿಸಿಕೊಂಡಿರುವುದಿಲ್ಲ. ಬಾಡಿಗೆದಾರರನ್ನು ಖಾಲಿ ಮಾಡಿಸಿ ಕ್ರಯ ಪತ್ರವನ್ನು ಮಾಡಿಕೊಡುತ್ತೇನೆ ಎಂದು ಹೇಳಿದ್ದು ಆದರೆ ಅವರನ್ನು ಖಾಲಿ ಮಾಡಿಸಿರುವುದಿಲ್ಲ ಕ್ರಯ ಪತ್ರವನ್ನೂ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ ನಾನು ಪತ್ರಬರಹಗಾರರಿಂದ ಕರಾರು ಪತ್ರಕ್ಕೆ ಒಕ್ಕಣೆಯನ್ನು ಬರೆಯಿಸಿ ಸಹಿ ಮಾಡಿರುತ್ತೆನೆ ಎಂದರೆ ಸರಿಯಲ್ಲ ಸಾಕ್ಷಿಗಳ ಸಮಕ್ಷಮ ಮುಂಗಡ ಹಣ ಮೊದಲೇ 5 ಲಕ್ಷ ಇದ್ದುದರಿಂದ ಕೇವಲ 1 ಲಕ್ಷ ರೂಪಾಯಿಯನ್ನು ಪಡೆದಿರುತ್ತೆನೆ ಎಂದರೆ ಸರಿಯಲ್ಲ. ಉಳಿಕೆ ಹಣವನ್ನು ಪಡೆದುಕೊಂಡು ಕ್ರಯ ಪತ್ರವನ್ನು ಮಾಡಿಕೊಡುವಂತೆ ವಾದಿ ಹಾಗಾಗ ಹೇಳಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ನಾನು ಅವರು ಕೇಳಿಕೆ ಹಾರಿಕೆ ಉತ್ತರವನ್ನು ಕೊಡುತ್ತಾ ಬಂದಿರುತ್ತೆನೆ ಎಂದರೆ ಸರಿಯಲ್ಲ. ನನ್ನ ನಡವಳಿಕೆಯಿಂದ ಬೇಸತ್ತು ವಾದಿಯರು ವಕೀಲರ ಮುಖೇನ

ತಿಳುವಳಿಕೆ ಪತ್ರ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ ವಕೀಲರ ನೋಟಿಸ್ ಜಾರಿ ಆಗಿರುತ್ತದೆ ಎಂದರೆ ಸರಿಯಲ್ಲ. ಕರಾರು ಪತ್ರ ಆದ ಮೇಲೆ ಖಾಲಿ ಪತ್ರವನ್ನು ಹಿಂದಕ್ಕೆ ಕೊಡುತ್ತೇವೆ ಎಂದು ಹೇಳಿದ್ದು ಅದನ್ನು ದಾಖಲಾತಿಯಲ್ಲಿ ಬರೆಸಿರುತ್ತೆನೆ. ಈಗ ನನಗೆ ತೋರಿಸುತ್ತಿರುವಂತಹ ನಿಪಿ-3 ರಲ್ಲಿ ಇರುವ ಸಹಿ ನನ್ನ ಸಹಿ ಅಲ್ಲ. ಸದರಿ ಸಹಿ ನನ್ನದೇ ಎಂದರೆ ಸರಿಯಲ್ಲ. ನಾನು ಮೊದಲಿನಿಂದಲೂ ಶ್ರವಣಬೆಳಗೊಳ ಹೋಬಳಿ ನಾಗಯ್ಯನ ಕೊಪ್ಪಲಿನಲ್ಲಿ ವಾಸಿಸುತ್ತಿದ್ದೆನೆ ಎಂದರೆ ಸರಿ. ನನಗೆ ಯಾವುದೇ ನೋಟಿಸ್ ಬರುವುದಿದ್ದರೂ ಯಾವುದೇ ಪತ್ರ ಬರುವುದಿದ್ದರೂ ಅಂಚೆ ಇಲಾಖೇಯವರು ತಂದು ಕೊಡುತ್ತಾರೆ ಎಂದರೆ ಸರಿ. ನನಗೂ ಅಂಚೆ ಇಲಾಖೆಯವರಿಗೂ ಯಾವುದೇ ದ್ವೇಷ ಇರುವುದಿಲ್ಲ. ನಾನು ಸಹಿ ಮಾಡಿ ಪಡೆದುಕೊಂಡು ವಾದಿಯರಿಗೆ ಮೊಸ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಚೆ ಕಚೇರಿಯವರು ನನಗೆ ನೋಟಿಸ್ ಜಾರಿ ಮಾಡಿ ಹಿಂದಕ್ಕೆ acknowledgement ನ್ನು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ನಾಗಯ್ಯನ ಕೊಪ್ಪಲು ಗ್ರಾಮದಲ್ಲಿ ಡಿ ಪಿ ರಾಮು ರವರ ಮಗ ಮಧುಸೂದನ್ ಎಂದರೆ ನಾನೇ. ನಾನು ಅನುಕೂಲಕ್ಕೆ ತಕ್ಕಂತೆ ಸುಳ್ಳು ಸಾಕ್ಷ್ಯವನ್ನು ಹೇಳುತ್ತಾ ಬಂದಿರುತ್ತೆನೆ ಎಂದರೆ ಸರಿಯಲ್ಲ. ಖಾಲಿ ಪತ್ರಕ್ಕೆ ಸಹಿ ಮಾಡಿದ್ದು ಅದನ್ನು ವಾಪಸ್ಸು ಕೊಡುವಂತೆ ಕೇಳಿರುತ್ತೇನೆ. ಕೊಡದೇ ಇದ್ದುದರಿಂದ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುವುದಿಲ್ಲ, ವಕೀಲರ ಮೂಲಕ ತಿಳುವಳಿಕೆ ಪತ್ರ ಸಹ ಕಳುಹಿಸಿರುವುದಿಲ್ಲ ಸಾಕ್ಷಿಗಳ ಸಮಕ್ಷಮ ಸಹಿಗಳನ್ನು ಮಾಡಿದ್ದಾಗ್ಯೂ ಹಾಗೂ ಹಣವನ್ನು ಪಡೆದುಕೊಂಡಿದ್ದಾಗ್ಯೂ ದಾಖಲಾತಿಯನ್ನು ನೋಡಿ ಸಹಿ ಮಾಡಿದ್ದಗ್ಯೂ ವಿಚಾರ ಗೊತ್ತಿದ್ದರೂ ಖಾಲಿ ಪೇಪರ್ ಗೆ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕಾಶ್, ಧನಂಜಯ DW2 and 3 ನನಗೆ 15 -16

ವರ್ಷಗಳಿಂದ ಸ್ನೇಹಿತರು.  ವಾದಿಗೆ ನೊಂದಾಯಿತು ಕರಾರು ಪತ್ರ ಆಗುವಾಗ ಪ್ರಕಾಶ್ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ರದ್ದು ಪತ್ರ ಆಗುವಾಗ ಪ್ರಕಶ್ ರವರು ಇದ್ದರು ಆದರೆ ಸಹಿ ಮಾಡಿರುವುದಿಲ್ಲ. ಧನಂಜಯ್ ರವರು ಸಿಮೆಂಟ್ ವ್ಯವಹಾರ ಮಾಡುತ್ತಾರೆ. ಪ್ರಕಾಶ್ ರವರು 6-7 ವರ್ಷಗಳಿಂದ  ವಕೀಲರ ವೃತ್ತಿಯನ್ನು ಮಾಡುತ್ತಿದ್ದಾರೆ.  ಸಾಕ್ಷಿ ಗಳು ಕರಾರು ಪತ್ರ ಮಾಡುವ ಸಮಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕರಾರು ಪತ್ರವೇ ಆಗಿರುವುದಿಲ್ಲ ಎಂದು ಹೇಳುತ್ತಾರೆ. ಖಾಲಿ ಪತ್ರಕ್ಕೆ ಸಹಿಯನ್ನು  ಸಬ್ ರಿಜಿಸ್ಟರ್ ಕಚೇರಿಯ ಮುಂದೆ ಇರುವಂತಹ ಪತ್ರ ಬರಹಗಾರರ ಕಚೇರಿಯಲ್ಲಿ ಮಾಡಿರುತ್ತೇನೆ. ಸಹಿಯನ್ನು ಮಾಡುವಾಗ ಸಮಯ 3.00 ಗಂಟೆ ಆಗಿತ್ತು. ನಂತರ ನೊಂದಾಯಿತ ಪತ್ರ ಮಾಡಿಸಲಾಗಿರುತ್ತದೆ.  ಜಮೀನಿನ ಕ್ರಯ ಪತ್ರ ಮಾಡಿಸಿಕೊಂಡು ಸೈಟಿನ ಬಗ್ಗೆ ಇದ್ದಂತಹ ಕ್ರಯ ಪತ್ರ ರದ್ದುಪಡಿಸಿರುತ್ತೆವೆ . ಸಾಕ್ಷಿದಾರರು DW2 and DW3  ನನ್ನ ಸಂಬಂಧಿಕರು ಎಂದರೆ ಸರಿಯಲ್ಲ.  ನಾನು ಕರಾರು ಪತ್ರಕ್ಕೆ ಸಹಿ ಮಾಡಿದ್ದಾಗ್ಯೂ ಸಹ DW2 and 3  ನನ್ನ ಸಂಬಂಧಿಕರಾಗಿರುವ ಕಾರಣ ಅವರಿಂದ ಸುಳ್ಳು ಸಾಕ್ಷ್ಯವನ್ನು ಹೇಳಿಸಿ ನನ್ನ ಕೇಸಿಗೆ ಅನುಕೂಲಕ್ಕೆ ತಕ್ಕಂತೆ ಸಾಕ್ಷ್ಯವನ್ನು ಹೇಳಿಸಿರುತ್ತೆನೆ ಎಂದರೆ ಸರಿಯಲ್ಲ.  ವಾದಿಯರು ಕರಾರು ಆದಾಗಿನಿಂದ ತನ್ನಪಾಲಿನ ಕರ್ತವ್ಯವನ್ನು ಮಾಡಲು ಸಿದ್ದರು ಎಂದರೆ ಕರಾರು ಪತ್ರ ಮಾಡದೇ ಇದ್ದಾಗ ಅದು ಹೇಗೆ ಸಾಧ್ಯ ಎಂದು ಹೇಳುತ್ತಾರೆ.  ಆಗ ನೊಂದಣಿ ಆಗಲು ಸಮಯ  ಮೀರಿದ್ದರಿಂದ ಆ ಪತ್ರ ನೊಂದಣಿ ಆಗದೇ ಉಳಿದಿರುತ್ತದೆ ಎಂದರೆ ನೊಂದಣಿ ಆದಂತಹ ದಾಖಲಾತಿ ಮುಂಚನೇ ಆ ಖಾಲಿ ಪತ್ರಕ್ಕೆ ಸಹಿ ಪಡೆದುಕೊಂಡಿರುತ್ತಾರೆ ಎನ್ನುತ್ತಾರೆ.  ಕರಾರು ಪತ್ರ ನೊಂದಣಿ ಆಗದೇ ಇದ್ದುದರಿಂದ ಖಾಲಿ ಪತ್ರಕ್ಕೆ ಸಹಿ ಮಾಡಿಸಿಕೊಂಡಿರುತ್ತಾರೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂ ದರೆ ಸರಿಯಲ್ಲ. ವಾದಿಗೆ ಮೋಸ ಮಾಡಲು ಸುಳ್ಳು ಅಪಾದನೆಯನ್ನು ಮಾಡುತ್ತಿದ್ದೇನೆ ಎಂ ದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ